ಬೆಂಗಳೂರು ಕೃಷಿ ವಿದ್ಯಾನಿಲಯ, 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮ. ಉದ್ಘಾಟನೆ: ಬೆಂ. ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್, ಮುಖ್ಯಅತಿಥಿಗಳು: ಶಾಸಕ ಶರತ್ ಬಚ್ಚೇಗೌಡ, ಅನ್ಬುಕುಮಾರ್. ಎಲ್. ಕೆ.ಅತೀಕ್. ಅಧ್ಯಕ್ಷತೆ: ಡಾ. ಬಸವೇಗೌಡ. ಸ್ಥಳ: ಗಾಂಧಿ ಕೃಷ್ಣ ವಿಜ್ಞಾನ ಕೇಂದ್ರ, ಉತ್ತರ ಬ್ಲಾಕ್ ಸಭಾಂಗಣ. 11.00

20-07-2024
Udayavani Pg 03

---

ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯ: 'ಪ್ರತಿಭಾ ಪುರಸ್ಕಾರ'ದ ಉದ್ಘಾಟನಾ ಕಾರ್ಯಕ್ರಮ. ಮುಖ್ಯ ಅತಿಥಿಗಳು: ಕೃಷಿ ವಿವಿಯ ಕುಲಪತಿ ಡಾ. ಎಸ್.ವಿ. ಸುರೇಶ್, ಶಾಸಕ ಶರತ್ ಬಚ್ಚೇಗೌಡ, ಕೃಷಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಅನ್ಬುಕುಮಾರ್. ಸ್ಥಳ: ಉತ್ತರ ಬ್ಲಾಕ್ ಸಭಾಂಗಣ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ). ಬೆಳಗ್ಗೆ 11ಕ್ಕೆ.

20-07-2024
S-karanataka Pg 03

---

ವಿಜಯ ಕರ್ನಾಟಕ

ಶನಿವಾರ,20 ಜುಲೈ 2024

ಬೆಂಗಳೂರು ಕೃಷಿ ವಿವಿ: ಪ್ರತಿಭಾ ಪುರಸ್ಕಾರ ಕಾರ್ಯಕ್ರಮ. ಉದ್ಘಾಟನೆ: ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ. ಅತಿಥಿಗಳು: ಶಾಸಕ ಶರತ್ ಬಚ್ಚೇಗೌಡ, ಕೃಷಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅನ್ಬುಕುಮಾರ್.

**ಸ್ಥಳ:** ಉತ್ತರ ಬ್ಲಾಕ್ ಸಭಾಂಗಣ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ. ಬೆ. 11.

---

# ಎಲ್ಲ ಜಿಲ್ಲೆಗಳಲ್ಲೂ ಕೃಷಿ ಹೊಂಡ ಯೋಜನೆ

**ಬೆಂಗಳೂರು:** ಕೃಷಿ ಹೊಂಡ ಯೋಜನೆ ಪುನಾರಂಭಿಸಿ, ರಾಜ್ಯದೆಲ್ಲೆಡೆ ವಿಸ್ತರಿಸಲಾಗಿದೆ. ನೀರಾವರಿ ಅಚ್ಚುಕಟ್ಟು ಪ್ರದೇಶದ ಕೊನೆಯ ಭಾಗದ ರೈತರಿಗೂ ಅವಕಾಶ ಕಲ್ಪಿಸಲಾಗಿದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ವಿಧಾನ ಪರಿಷತ್‌ಗೆ ಶುಕ್ರವಾರ ಮಾಹಿತಿ ನೀಡಿದರು. ಬಿಜೆಪಿಯ ಕೇಶವಪ್ರಸಾದ್ ಪ್ರಶ್ನೆಗೆ ಉತ್ತರಿಸಿ, ಹೊಂಡಗಳಿಗೆ ಜಾರಿಬಿದ್ದ



ಮಕ್ಕಳ ಸಾವುಗಳ ಬಗ್ಗೆಯೂ ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಹೊಂಡಗಳಿಗೆ ತಂತಿ ಬೇಲಿ ಹಾಕುವುದಕ್ಕೂ ಪರಿಶಿಷ್ಟ ಜಾತಿಯವರಿಗೆ ಶೇ.50, ಇತರರಿಗೆ ಶೇ.40 ಸಬ್ಸಿಡಿ ಸೌಲಭ್ಯ ನೀಡಲಾಗುವುದು ಎಂದರು.

**ರಸಗೊಬ್ಬರ, ಬಿತ್ತನೆ ಬೀಜ ದಾಸ್ತಾನು:** ರೈತರಿಗೆ ರಸಗೊಬ್ಬರ, ಬಿತ್ತನೆ ಬೀಜ ಕೊರತೆಯಾಗದಂತೆ ಅಗತ್ಯ ದಾಸ್ತಾನು ಇರಿಸಲಾಗಿದೆ ಎಂದು ಸ್ಪಷ್ಟಪಡಿಸಿದರು. ಬಿಜೆಪಿಯ ಕೆ.ಎಸ್.ನವೀನ್ ರಸಗೊಬ್ಬರ ಕೊರತೆಯತ್ತ ಗಮನಸೆಳೆದಾಗ ಚಲುವರಾಯಸ್ವಾಮಿ ಉತ್ತರಿಸಿ, ಏಪ್ರಿಲ್‌ನಿಂದ ಜುಲೈವರೆಗೆ 17.58 ಲಕ್ಷ ಟನ್ ರಸಗೊಬ್ಬರ ಬೇಡಿಕೆಯಿದ್ದರೆ, 28.96 ಟನ್ ದಾಸ್ತಾನಿರಿಸಲಾಗಿದೆ. ಈ ಪೈಕಿ ಇದುವರೆಗೆ 14.30 ಟನ್ ಮಾರಾಟವಾಗಿದೆ. ಹಾಗೆಯೇ 1.28 ಲಕ್ಷ ಟನ್ ಡಿಎಪಿ ಸಂಗ್ರಹವಿದೆ ಎಂದು ಮಾಹಿತಿ ನೀಡಿದರು.

20-07-2024
Vijayavani Pg 06

20-07-2024
V-karnataka Pg 08

---

# ನೈಸರ್ಗಿಕ ಕೃಷಿ: ಬೆಳೆ ನಷ್ಟಕ್ಕೆ ಕೇಂದ್ರದಿಂದ ಸಬ್ಸಿಡಿ: ಸಚಿವ

**ಲಖನೌ:** ರೈತರು ತಮ್ಮ ಜಮೀನಿನ ಒಂದು ಭಾಗದಲ್ಲಾದರೂ ನೈಸರ್ಗಿಕ ಕೃಷಿ ಮಾಡಬೇಕು ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾನ್ ರೈತರಿಗೆ ಕರೆ ನೀಡಿದ್ದಾರೆ. ನೈಸರ್ಗಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಬೇಸಾಯದಲ್ಲಿ ತೊಡಗುವ ರೈತರಿಗೆ ಮೊದಲ ಎರಡು ವರ್ಷ ಬೆಳೆ ನಷ್ಟವಾದರೆ ಕೇಂದ್ರ ಸರಕಾರ ಸಬ್ಸಿಡಿ ನೀಡುತ್ತದೆ ಎಂದು ಭರವಸೆ ನೀಡಿದ್ದಾರೆ.

"ಹೊಸ ಪದ್ಧತಿ ಅಳವಡಿಸಿಕೊಂಡಾಗ ಅದು ದಿಢೀರ್ ಲಾಭ ತಂದುಕೊಡುತ್ತದೆ ಎಂದು ಹೇಳಲಾಗುವುದಿಲ್ಲ. ಖಂಡಿತ ಇಳುವರಿ ನಿರೀಕ್ಷಿತ ಪ್ರಮಾಣದಲ್ಲಿ ಇರುವುದಿಲ್ಲ. ಇಂಥ ಸನ್ನಿವೇಶದಲ್ಲಿ ಸರಕಾರ ಸಬ್ಸಿಡಿ ನೀಡಿ ಹೊಸ ಪದ್ಧತಿಗೆ ಉತ್ತೇಜನ ನೀಡುತ್ತದೆ." ಎಂದರು.